SRI B. SUBBAIAH SHETTY.—What I learn is that the Committee has been appointed for making an indepth study. They have to elicit information from all sections of the society who are interested in this Educational field and only after that, they will be drafting this Bill. So, about other objectives and all that, I don't know what type of objective the hon. Member has got in his mind. If it is spelled out, definitely, we could examine in what way we could formulate the policy and all that.

Withdrawal of land granted to Shimoga Sugar Factory

538 SRI KADIDAL DIVAKAR (Thirthahalli)—

Will the Minister for Revenue be pelased to state;—

(*a*) the extent of area (in acres) earmarked to the Sugar Factory Shimoga for growing sugarcane;

(*b*) the rules under which the said land has been earmarked and when ;

(*c*) whether the Government propose to take back the said land and distribute the same to the persons who have lost their land due to Varahi and Chakra Hydro-Electric scheme ;

(*d*) whether it has come to the notice of the Government that Thousands of acres of land has been unauthorisedly cultivated by the authorities of this Factory;

(*e*) if so, the action taken by the Government in this regard ?

SRI B BASAVALINGAPPA (**Minister for Revenue**)—

(a) 1385 acres and 06 guntas.

(*b*) The above mentioned land has been given to the Sugar Factory during the year 1957, as per lease agreement for 30 years.

(*c*) Yes, there is a proposal.

(*d*) No.

(*e*) Does not arise.

ಶ್ರೀ ಕಡಿದಾಳ ದಿವಾಕರ್ :—ಸ್ವಾಮಿ, ಮಾನ್ಯ ಮಂತ್ರಿಗಳು ಈ ಪ್ರಶ್ನೆಯ (ಅ) ಗೆ ಉತ್ತರವಾಗಿ ೧೩೮೫ ಎಕರೆ ೦೬ ಗುಂಟೆ ಎಂದು ನಿಖರವಾಗಿ ತಿಳಿಸಿದ್ದಾರೆ. ಇದರಲ್ಲಿ ಶಿವಮೊಗ್ಗಾ ಜಿಲ್ಲೆಯಲ್ಲಿ ಎಷ್ಟು ಕೊಟ್ಟಿದ್ದೀರಿ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಎಕರೆ ಕೊಟ್ಟಿದ್ದೀರಿ ಅನ್ನುವುದನ್ನು ತಿಳಿಸುತ್ತೀರಾ ?

ಎರಡನೆಯದಾಗಿ ಈ ಸಕ್ಕರೆ ಕಾರ್ಖಾನೆಗೆ ಲೈಸನ್‌ಕೊಟ್ಟಿರುವ ಹೊತ್ತಿಗೆ ಅವರಿಗೆ ಬೇಕಾದಷ್ಟು ಕಬ್ಬನ್ನು ನೀವೇ ಬೆಳೆದುಕೊಳ್ಳಿ ಎಂದು ಈ ಜಮೀನನ್ನು ಕೊಟ್ಟಿದ್ದೀರಾ ಅಥವಾ ರೈತರು ಕಬ್ಬನ್ನು ಬೆಳೆಸಿ ಈ ಸಕ್ಕರೆ ಕಾರ್ಖಾನೆಯನ್ನು ನಡೆಸಿ ಎಂದು ಹೇಳಿ ಈ ಜಮೀನನ್ನು ಕೊಟ್ಟಿದ್ದಿರಾ ? ಹೀಗೆ ಕೊಟ್ಟಿರುವುದರಿಂದ ಭೂಸುಧಾರಣ ಕಾನೂನು ಪ್ರಕಾರ ಇದಕ್ಕೆ ಏನೂ ಅನ್ವಯವಾಗುವುದಿಲ್ಲವೇ ?

†ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಶಿವಮೊಗ್ಗಾ ತಾಲ್ಲೂಕಿನಲ್ಲಿ ೪೬೫ ಎಕರೆ ಜಮೀನು ಮತ್ತು ಭದ್ರಾವತಿ ತಾಲ್ಲೂಕಿನಲ್ಲಿ ೯೨೦ ಎಕರೆ ೬ ಗುಂಟೆ ಜಮೀನನ್ನು ೩೦ ವರ್ಷದ ಲೀಸ್ ಮೇಲೆ ಅವರಿಗೆ ಕೊಟ್ಟಿದ್ದೇವೆ. ಈ ಬಗ್ಗೆ ಭೂಸುಧಾರಣಾ ಕಾನೂನು ಬಂದ ಮೇಲೆ ಇಷ್ಟೊಂದು ಜಮೀನುಗಳನ್ನು ಅವರಿಗೆ ಕೊಡುವುದಕ್ಕಾಗುವುದಿಲ್ಲ. ಅವರು ಎಷ್ಟು ಇಟ್ಟುಕೊಳ್ಳಬೇಕೋ ಅಷ್ಟನ್ನು ಕೊಡುತ್ತೇವೆ ಅಂದರೆ ಸುಮಾರು ೫೦ ಯೂನಿಟ್ಸ್ ಅಷ್ಟು ಜಮೀನನ್ನು ಬಿಡುತ್ತೇವೆ ಉಳಿದುದನ್ನು ಕಾನೂನು ಪ್ರಕಾರ ವಿಲೇವಾರಿ ಮಾಡಬೇಕಾಗುತ್ತದೆ. ಆ ಬಗ್ಗೆ ನಾವು ಯೋಚನೆ ಮಾಡುತ್ತಿದ್ದೇವೆ. ಇದುವರೆಗೂ ಕೂಡ ಆ ಬಗ್ಗೆ ನಾವು ಇನ್ನೂ ಯೋಚನೆ ಮಾಡಿಲ್ಲ.

ಇನ್ನು ವರಾಹಿ ಮತ್ತು ಚಕ್ರ ಜಲ ವಿದ್ಯುತ್ ಯೋಜನೆಯಲ್ಲಿ ಜಮೀನು ಕಳೆದುಕೊಂಡವರಿಗೆ ಅವರ ಪುನರ್ವಸತಿ ಸೌಕರ್ಯಕ್ಕಾಗಿ ಅಗಸನಹಳ್ಳಿ ಗ್ರಾಮದ ಸರ್ವೆ ನಂಬರ್ ೧೬೭ ರಲ್ಲಿರುವ ಸುಮಾರು ಒಂದು ಸಾವಿರ ಎಕರೆ ಜಮೀನನ್ನು ಹಂಚಬೇಕು ಎಂದು ಪುನರ್ವಸತಿ ಸಮಿತಿಯು ತೀರ್ಮಾನ ಮಾಡಿದೆ. ಆದರೆ ಇದರ ಬಗ್ಗೆ ಸರ್ಕಾರ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲಾ. ಈ ಬಗ್ಗೆ ಅವರಿಗೆ ಕಾಂಪನ್ಸೇಷನ್ ಕೊಡುವಾಗ ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಕಟ್ಟುನಿಟ್ಟಾಗಿ ಹಂಚಬೇಕು ಎಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಕಡಿದಾಳ್ ದಿವಾಕರ್.—ಸ್ವಾಮಿ, ಭದ್ರಾವತಿ ತಾಲ್ಲೂಕಿನಲ್ಲಿ ೯೨೦ ಎಕರೆ ಜಮೀನನ್ನು ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ಚಿಕ್ಕಮಗಳೂರಿನ ಡೆಪ್ಯೂಟಿ ಕಮೀಷನರು ನನಗೆ ಕಾಗದ ಬರೆದಿದ್ದಾರೆ. ತರೀಕೆರೆಯಲ್ಲಿ ೮೫೬ ಎಕರೆ ಜಮೀನನ್ನು ನೀಡಿದ್ದೇವೆ ಎಂದು. ಅವರ ಪ್ರಕಾರ ಒಟ್ಟು ೨೩೫೫ ಎಕರೆ ಜಮೀನು ಆಗುತ್ತೆ. ನೀವು ಹೇಳಿದ ಪ್ರಕಾರ ೨೩೭೭ ಎಕರೆ ಜಮೀನು ಆಗುತ್ತದೆ. ಶಿವಮೊಗ್ಗಾ ಜಿಲ್ಲೆಯಲ್ಲಿ ೮೫೪ ಎಕರೆ ಜಮೀನನ್ನು ಹಂಚಿದ್ದೇವೆ ಎಂದು ಚಿಕ್ಕಮಗಳೂರಿನ ಡೆಪ್ಯೂಟಿ ಕಮೀಷನರು ನನಗೆ ಕಾಗದ ಬರೆದಿದ್ದಾರೆ. ಇದಕ್ಕೆ ತಾವು ಏನು ಹೇಳುತ್ತೀರಾ ಸ್ವಾಮಿ ?

ಶ್ರೀ ಬಿ. ಬಸವಲಿಂಗಪ್ಪ —ಚಿಕ್ಕಮಗಳೂರಿನ ಡೆಪ್ಯೂಟಿ ಕಮೀಷನರು ಆ ಬಗ್ಗೆ ಮಾನ್ಯ ಸದಸ್ಯರಿಗೆ ಏನು ಕಾಗದ ಬರೆದಿದ್ದಾರೆ ಅದು ನಮ್ಮ ರಿಕಾರ್ಡ್‌ನಲ್ಲಿ ಇಲ್ಲ. ಇರಬಹುದು. ಮಾನ್ಯ ಸದಸ್ಯರು ಅವರಿಗೆ ಏನು ಕಾಗದ ಬರೆದಿದ್ದಾರೆ ಅದನ್ನು ಕೊಟ್ಟರೆ ನಾನು ವಿಚಾರ ಮಾಡುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಕಾಯಿದೆ ಪ್ರಕಾರ ಎಷ್ಟೆಷ್ಟು ಎಕರೆ ಜಮೀನು ಒಬ್ಬೊಬ್ಬರಿಗೆ ಹಂಚಬಹುದೋ ಆ ಪ್ರಕಾರ ಹಂಚುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕಡಿದಾಳ್ ದಿವಾಕರ್.—ಇದರಲ್ಲಿ ಏನಾದರೂ ಎನ್‌ಕ್ರೋಚ್‌ಮೆಂಟ್ ಇದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದೀರಿ. ಚಿಕ್ಕಮಗಳೂರಿನ ಡೆಪ್ಯೂಟಿ ಕಮಿಷನರು ಇದನ್ನು ಸರ್ವೆ ಡಿಪಾರ್ಟ್‌ಮೆಂಟ್‌ಗೆ ರೆಫರ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದರ ನಿಜಸ್ಥಿತಿ ಹೇಳಬೇಕಾದರೆ ಅಲ್ಲಿ ಸುಮಾರು ೨ ಸಾವಿರ ಎಕರೆಗಿಂತಲೂ ಜಾಸ್ತಿ ಜಮೀನಿನಷ್ಟು ಎನ್‌ಕ್ರೋಚ್‌ಮೆಂಟ್ ಇದೆ; ನನಗೆ ಗೊತ್ತಿರುವ ಪ್ರಕಾರ ತಾವು ಈ ಬಗ್ಗೆ ಇಲ್ಲ ಎಂದು ಹೇಳಿದರೆ ನನಗೆ ಆಶ್ಚರ್ಯವಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಎರಹಳ್ಳಿ ಗಾ ಮದಲ್ಲಿ ೩೫೬ ಎಕರೆ ಜಮೀನನಷ್ಟು ಅಕ್ರಮ ಸಾಗುವಳಿ ಮಾಡಿದ್ದಾರೆ ಎಂದು ಹೇಳಿದ್ದಾರೆ. ಆದರೆ ನೀವು ಹೇಳಿದ ಸಂಗತಿ ನಿಜ ಇದ್ದರೂ ಇರಬಹುದು. ಆದರೆ ೧-೯-೧೯೭೭ ರಿಂದ ಆದು ಯಾವ ಸ್ಥಿತಿಯಲ್ಲಿತ್ತೋ ಆದರ ಪ್ರಕಾರ ನಾವು ಅವರಿಗೆ ಪಾಯಂ ಮಾಡುವುದಕ್ಕೆ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಉಳಿದುದನ್ನು ಮುತ್ತೆ ಮಾಡುವುದಕ್ಕೆ ಹೋಗಿಲ್ಲಾ. ನಾನು ಆಗಲೇ ಹೇಳಿದ ಹಾಗೆ ಎಲ್ಲರಿಗೂ ಜಮೀನು ಕೊಡುವುದಕ್ಕೆ ಹೋಗಿಲ್ಲಾ. ಏತಕ್ಕೆಂದರೆ ರೂಲ್ಸ್ ಪ್ರಕಾರ ಹಿಂದೆ ಇದ್ದ ಅಧಿಕಾರಿಗಳು ಅದನ್ನು ಸರಿಯಾಗಿ ಇಟ್ಟುಕೊಂಡು ಮಂಜೂರು ಮಾಡಿಲ್ಲಾ. ಈಗ ನಾವು ಅದನ್ನು ಕಟ್ಟುನಿಟ್ಟಾಗಿ ಮಾಡಬೇಕು ಎಂದು ಅವರಿಗೆ ಆದೇಶ ಕೊಟ್ಟಿದ್ದೇವೆ.

ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ್.—ಸ್ವಾಮಿ ತಾವು ಈ ಪ್ರಶ್ನೆಯ (ಈ) ಗೆ ಉತ್ತರವಾಗಿ ಸರಕಾರದ ಗಮನಕ್ಕೆ ಬಂದಿರುವುದಿಲ್ಲ ಎಂದು ಹೇಳಿದ್ದೀರಿ. ಒಬ್ಬ ಶಾಸಕ ಒಂದು ಪ್ರಶ್ನೆಯನ್ನು ಕಳಿಸಿಕೊಟ್ಟಿದಾಗ ಅದು ಸರ್ಕಾರದ ಗಮನಕ್ಕೆ ಬಂದಂತೆ ಆಗುವುದಿಲ್ಲವೇ ? ಆದುವರಿಂದ ಅದು ಸರಕಾರದ ಗಮನಕ್ಕೆ ಬಂದಿಲ್ಲಾ ಅಂತ ಹೇಳುವುದು ಅಷ್ಟು ಸೂಕ್ತವಾಗಲಾರದು. ಅದೇನೇ ಇರಲಿ ಸುಮಾರು ೩

ಸಾವಿರ ಎಕರೆಯಷ್ಟು ಬಗರ್ ಹುಕುಂ ಸಾಗುವಳಿ ನಡೆಯುತ್ತಾ ಇದೆ. ಆದುದರಿಂದ ಈ ವರಾಹಿ ಮತ್ತು ಚಕ್ರಾ ಜಲ ವಿದ್ಯುತ್ ಯೋಜನೆಯಲ್ಲಿ ಜಮೀನು ಕಳೆದುಕೊಂಡವರಿಗೆ ಅಲ್ಲೇ ವಿತರಣೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಕೇಳಿರತಕ್ಕಂಥಾ ಪ್ರಶ್ನೆಗೆ ನಾನು ನೇರವಾಗಿಯೇ ಉತ್ತರ ಕೊಟ್ಟಿದ್ದೇನೆ. ಇದಕ್ಕಿಂತಲೂ ಇನ್ನೂ ಹೆಚ್ಚು ವಿಚಾರ ಬೇಕಾಗಿದ್ದರೆ ಆದನ್ನು ವಿಚಾರ ಮಾಡಿ ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರು ಡೆಪ್ಯೂಟಿ ಕಮೀಷನರು ನನಗೆ ಕಾಗದ ಬರೆದಿದ್ದಾರೆ ಎಂದು ಏನು ತಿಳಿಸಿದ್ದಾರೆ ಆದನ್ನು ಕೊಡಲಿ ವಿಚಾರ ಮಾಡುತ್ತೇನೆ. ಈ ಬಗರ್ ಹುಕುಂ ಸಾಗುವಳಿಗೆ ಜಮೀನನ್ನು ಎಷ್ಟೆಷ್ಟು ಕೊಡಬೇಕೆನ್ನುವುದು ಲ್ಯಾಂಡ್ ಗ್ರಾಂಟ್ ರೂಲ್ಸ್‌ನಲ್ಲಿ ಇದೆ. ಆದರ ಪ್ರಕಾರ ಆವರು ಮಾಡಿದ್ದಾರೆ. ೨ ಲಕ್ಷ ಳಿಟ ಸಾವಿರ ಎಕರೆ ಜಮೀನನ್ನು ಅಕ್ರಮ ಸಾಗುವಳಿಯಾಗಿ ಏನು ಮಾಡುತ್ತಿದ್ದಾರೆ ಆ ಜಮೀನನ್ನು ಅವರಿಗೇನೇ ಮಂಜೂರು ಮಾಡಿದ್ದಾರೆ. ಉಳಿದದ್ದು ಮಾಡಬೇಡಿ ಎಂದು ಹೇಳಿದ್ದೇವೆ. ಕಾರಣ ಅನೇಕ ಜನ ವಿದ್ಯಾವಂತರು ಮತ್ತು ಜಾಣರು ಈ ಒಂದು ನೆವದಲ್ಲಿ ಸರ್ಕಾರೀ ಜಮೀನನ್ನು ಹೊಡೆಯಲಿಕ್ಕೆ ಪ್ರಯತ್ನ ಮಾಡಿದ್ದಾರೆ, ಆದರಿಂದ ಆದನ್ನು ಮಾಡಿಲ್ಲಾ. ಮತ್ತು ಕೆಲವರಿಗೆ ಏನು ಕೊಟ್ಟಿದ್ದರೋ ಅವರಿಂದ ಆದನ್ನು ಕಿತ್ತು ಹಾಕಿದ್ದೇವೆ ಮತ್ತು ಕೆಲವನ್ನು ವಜಾ ಮಾಡಿದ್ದೇವೆ. ಈ ಬಗರ್ ಹುಕುಂ ಸಾಗುವಳಿಯಲ್ಲಿ ಮಾಡುತ್ತಾ ಇರುವ ಜಮೀನು ನಿಜವಾಗಿ ಯಾರು ಯಾರಿಗೆ ಸಿಕ್ಕ ಬೇಕೋ ಅಂಥವರಿಗೆಲ್ಲಾ ಆ ಜಮೀನನ್ನು ಮಂಜೂರು ಮಾಡಿದ್ದೇವೆ.

ಶ್ರೀ ಕಡಿದಾಳ್ ದಿವಾಕರ್.—ಈ ಬಗರ್ ಹುಕುಂ ಸಾಗುವಳಿ ಜಮೀನು ಅವರ ಪ್ರಕಾರ ೩ ಸಾವಿರ ಎಕರೆ ಆಗುತ್ತದೆ ಮತ್ತು ನೀವು ಹೇಳಿದ ಪ್ರಕಾರ ೨ ಸಾವಿರ ಎಕರೆ ಆಗುತ್ತದೆ. ಅಂದರೆ ಒಟ್ಟು ೫ ಸಾವಿರ ಎಕರೆಯಾಗುತ್ತದೆ. ಈಗ ನೀವು ದೇಶದಲ್ಲಿ ಏನೇನು ದೊಡ್ಡ ಪ್ರಾಜೆಕ್ಟಗಳನ್ನು ಮಾಡುವುದಕ್ಕೆ ತೆಗೆದು ಕೊಂಡಿದ್ದೀರಿ ಅಲ್ಲಿ ಜಮೀನು ಕಳೆದುಕೊಂಡಂಥಾ ಜನಗಳು ಬೀದಿಪಾಲಾಗಿದ್ದಾರೆ. ಏಹೊಳೆಯಲ್ಲಿ ಭೂಮಿ ಇಲ್ಲದೆ ಅವರು ವಾಪಸ್ಸು ಬಂದಿದ್ದಾರೆ. ಮತ್ತು ವರಾಹಿ ಪ್ರಾಜೆಕ್ಟ್ ಕೆಲಸ ಏನು ನಡೆಯ ಬೇಕಾಗಿತ್ತೋ ಆ ವರ್ಕ್ ಇನ್ನೂ ಆಗಿಲ್ಲಾ. ಅಲ್ಲಿಯ ಜನರಿಗೆ ಪುನರ್ವಸತಿ ಸೌಲಭ್ಯಗಳೂ ಕೂಡ ಇನ್ನೂ ಆಗಿಲ್ಲ. ಆದುದರಿಂದ ಆದಷ್ಟು ಜಾಗ್ರತೆ ಅಲ್ಲಿನ ಜನರಿಗೆ ಪುನರ್ವಸತಿ ಸೌಲಭ್ಯವನ್ನು ಮಾಡಿ ಕೊಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ:

ಶ್ರೀ ಬಿ. ಬಸವಲಿಂಗಪ್ಪ.—ತಾವು ಅವರ ಪುನರ್ವಸತಿ ಬಗ್ಗೆ ಕೇಳಿದ್ದೀರಿ. ಆದರ ಬಗ್ಗೆ ಸರ್ಕಾರ ತೀವ್ರವಾದ ಕಾರ್ಯಕ್ರಮ ತೆಗೆದುಕೊಂಡು ಆದನ್ನು ಹೇಗೆ ಮಾಡಬೇಕೋ ಆದರಂತೆ ಮಾಡುತ್ತೇವೆ. ಅಲ್ಲಿ ಜಮೀನು ಕಳೆದುಕೊಂಡವರಿಗೆ ಎಲ್ಲರಿಗೂ ಕೂಡ ಕಾಂಪನ್ಸೇಷನ್ ಕೊಟ್ಟು ಜಮೀನನ್ನು ಕೊಡುವು ದಕ್ಕಾಗುವುದಿಲ್ಲ. ಸಾಕಷ್ಟು ಪಣ ಕೊಡುತ್ತೇವೆ. ಅವರು ಬೇಕಾದರೆ ಆದರಿಂದ ಒಂದು ಅಂಗಡಿ ಯನ್ನಾದರೂ ಇಟ್ಟುಕೊಂಡು ಜೀವನ ಮಾಡಬಹುದು. ನಿಜವಾಗಿ ಅಲ್ಲಿ ಯಾರು ಯಾರಿಗೆ ಜಮೀನು ಇಲ್ಲ ಮತ್ತು ಅಲ್ಲಿ ಯಾರು ಯಾರು ಲ್ಯಾಂಡ್‌ಲೆಸ್ ಪೀಪಲ್ ಇದ್ದಾರೆ ಅವರಿಗೆ ಮಾತ್ರ ಕೊಡಬೇಕಾಗು ತ್ತದೆ. ಎಲ್ಲರಿಗೂ ಜಮೀನು ಕೊಡಬೇಕು ಅನ್ನುವುದಾದರೆ ಆಷ್ಟೊಂದು ಜಮೀನನ್ನು ಎಲ್ಲಿಂದ ತರಬೇಕು. ಹೇಳಿ. ಆದುದರಿಂದ ಎಲ್ಲರಿಗೂ ಕೂಡ ಜಮೀನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ಈ ಸಕ್ಕರೆ ಕಾರ್ಖಾನೆಯವರಿಗೆ ಏನು ಜಮೀನು ಕೊಟ್ಟಿದ್ದೀರೋ ಆದರ ಉದ್ದೇಶ ಈ ಜಮೀನಿನಲ್ಲಿ ವ್ಯವಸಾಯ ಮಾಡುತ್ತಾ ಇರುವ ಬೆಳೆಗಾರರು ಕಬ್ಬನ್ನು ಬೆಳೆಸಿ ಈ ಸಕ್ಕರೆ ಕಾರ್ಖಾನೆಗೆ ಕೊಡಬೇಕು ಅನ್ನುವ ಉದ್ದೇಶವಷ್ಟೆ. ಕೆಲವರು ಈ ಜಮೀನಿನ ಜೊತೆಗೆ ತಮ್ಮ ಸ್ವಂತ ಜಮೀನಿನಲ್ಲೂ ಸಹ ಕಬ್ಬನ್ನು ಬೆಳೆಸಿಕೊಂಡು ಫ್ಯಾಕ್ಟರಿಗೆ ತೆಗದುಕೊಂಡು ಹೋಗುತ್ತಾರೆ. ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ಬಸವಲಿಂಗಪ್ಪ.—ಆ ವಿಚಾರ ನನ್ನ ಗಮನಕ್ಕೆ ಬಂದಿಲ್ಲಾ. ಈ ಪ್ರಶ್ನೆ ಶಿವಮೊಗ್ಗಾ ಸಕ್ಕರೆ ಕಾರ್ಖಾನೆಗೆ ಸಂಬಂಧಪಟ್ಟ ಪ್ರಶ್ನೆ. ತಾವು ಈಗ ಕೇಳಿದಂಥ ಪ್ರಶ್ನೆಗೆ ಉತರ ಕೊಡಬೇಕಾದರೆ ಬೇರೆ ಪ್ರಶ್ನೆಯನ್ನು ಕಳುಹಿಸಿದರೆ ಉತ್ತರ ಕೊಡುತ್ತೇನೆ. ತಾವು ಹೇಳಿದುದನ್ನು ವಿಚಾರ ಮಾಡಬೇಕಾಗು ತ್ತದೆ. ಆದರೆ ಇಷ್ಟು ಮಾತ್ರ ಹೇಳಬಲ್ಲೆ. ಯಾರಿಗೆ ಆಗಲಿ ಈ ಸಕ್ಕರೆ ಕಾರ್ಖಾನೆಯಲ್ಲಿ ಜಮೀನು ಸಿಕ್ಕಿದ್ದರೂ ಸಹ ಅವರು ಕಾನೂನು ಪ್ರಕಾರ ಒಂದು ವಿತಿಗಿಂತ ಹೆಚ್ಚು ಜಮೀನನ್ನು ಇಟ್ಟುಕೊಳ್ಳುವು ದಕ್ಕಾಗುವುದಿಲ್ಲ. ಆವರಿಗೆ ಲಿಮಿಟ್‌ಗಿಂತ ಜಾಸ್ತಿ ಜಮೀನು ಇದ್ದರೆ ಕಾನೂನು ಪ್ರಕಾರ ಆದನ್ನು ಆದಷ್ಟು ಜಾಗ್ರತೆ ತೆಗೆದುಕೊಂಡು ಹಂಚುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಜಿ. ರಾಜುಗೌಡ.—ಬಗರ್ ಹುಕುಂನಲ್ಲಿ ಸಾಗುವಳಿ ಮಾಡತಕ್ಕ ರೈತರಿಗೆ ಮತ್ತು ಅತಿಕ್ರಮವಾಗಿ ಸರ್ಕಾರಿ ಜಮೀನನ್ನು ಸಾಗುವಳಿ ಮಾಡತಕ್ಕವರಿಗೆ ಇತ್ತೀಚೆಗೆ ಅವರ ಹೆಸರಿನಲ್ಲಿ ಖಾತೆಯನ್ನು ಕೊಡಬಾರದು ಎಂದು ಹೇಳಿದ್ದಾರೆ. ಆದರೆ ಕಾನೂನು ಪ್ರಕಾರ ಜಮೀನನ್ನು ಪಡೆಯಲು ಅರ್ಹತೆಯಿರತಕ್ಕವರಿಗೂ ತಮ್ಮ ಈ ಒಂದು ಸುತ್ತೋಲೆಯಿಂದ ತೊಂದರೆಯಾಗುವುದಿಲ್ಲವೆ ? ತಮ್ಮ ಈ ಸುತ್ತೋಲೆಯನ್ನು ಯಾವಾಗ ಸರಿಪಡಿಸುತ್ತೀರಿ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ನಾವು ಹೊರಡಿಸಿರತಕ್ಕ ಆಜ್ಞೆಯನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂದು ಕಾಣುತ್ತದೆ. ೧೯೮೯ ಸೆಪ್ಟೆಂಬರ್ ೧೯೭೭ರ ಸುತ್ತೋಲೆಯ ಪ್ರಕಾರ ಯಾರು ಯಾರು ಬಗರ್‌ಹುಕುಂನಲ್ಲಿ ಸಾಗುವಳಿ ಮಾಡಿಕೊಂಡಿದ್ದಾರೆಯೋ, ಅವರಿಗೆ ನಿಮ್ಮ ತಾಲ್ಲೂಕಿನಲ್ಲಿಯೂ ಸಾಗುವಳಿ ಚೀಟಿಯನ್ನು ಕೊಟ್ಟಿದ್ದೇವೆ. ಈ ಸಂಬಂಧದಲ್ಲಿ ರೆಕಾರ್ಡ್ಸ್ ವಿಲೇವಾರಿ ಮಾಡಲಿಕ್ಕೆ ನಮ್ಮಿದೇನೂ ಅಭ್ಯಂತರವಿಲ್ಲ. ಹೊಸದಾಗಿ ಸುತ್ತೋಲೆಯ ಪ್ರಕಾರ ಯಾರು ಯಾರು ಸಾಗುವಳಿ ಮಾಡಿಕೊಂಡಿದ್ದಾರೆ ಅಂಥವರಿಗೆ ಸಾಗುವಳಿ ಚೀಟಿಯನ್ನು ಕೊಡುವುದಿಲ್ಲವೆಂದು ಹೇಳಿದ್ದೇವೆ.

Krishna water dispute

373 Sri S.M. Sheeranaly Chandrsheka (Hosanagar)

Will the Cheif Minister be pleased to state :

(a) whether any award has been passed by the Commission appointed by the Government of India to resolve the sharing of Krishna water Dispute ;

(b) if so, the quantity of water allocated to Karnataka State ;

(c) whether there is any hurdle now to take up the Upper Tunga and Upper Bhadra Projects ;

(d) if so, what is the hurdle ;

(e) whether the Government intend to take up this work which is of very great importance ?

SRI N. BASAVAIAH.—(Minister of state for Major Irrigation) [on behalf of) ; SRI D. DEVARAJ URS (Chief Minister)]

(a) Yes. The Tribunal has given its decision.

(b) (i) 700 TMC out of 75% dependable flow of 2060 TMC of the river Krishna.

(ii) 34 TMC out of regenerated waters.

(c) No.

(d) Does not arise in view of reply to question (c) above.

(e) Yes, after the investigations are finalised and the project is got sanctioned.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಕೃಷ್ಣ ಯೋಜನೆಯ ಡಿಸ್ಪ್ಯೂಟ್ ಬಗ್ಗೆ ತೀರ್ಮಾನ ಕೊಟ್ಟು ಎಷ್ಟು ವರ್ಷವಾಯಿತು.